

# ಪ್ರೊಟೊಗಾನಿಸ್ಟ್ ಪಾತ್ರದ ಸೆಳೆತದಲ್ಲಿ ಸಪ್ತಮಿ ಗೌಡ

ಚೊಚ್ಚಲ ಸಿನಿಮಾ 'ಪಾಪ್‌ಕಾರ್ನ್ ಮಂಕಿ ಟೈಗರ್'ನಿಂದ ಈಗಿನವರೆಗೂ ಮಹಿಳಾ ಪ್ರೊಟೊಗಾನಿಸ್ಟ್ ರೀತಿಯ ಪಾತ್ರಗಳು ತಮ್ಮನ್ನು ಸದಾ ಆಕರ್ಷಿಸುವುದಾಗಿ ಹೇಳಿದ್ದಾರೆ ನಟಿ ಸಪ್ತಮಿ ಗೌಡ.

ನಾಯಕಿ ಮಾದರಿಯ ಕಡೆ ಸದಾ ಸೆಳೆತವೊಂದು ಇರುವುದಾಗಿ ಹೇಳಿರುವ ಅವರು, 'ಒಂದು ಹಂತ ಬರುವವರೆಗೂ ಶಾಂತ, ಆತ್ಮಾವಲೋಕನ ಮಾಡಿಕೊಳ್ಳುತ್ತ ಸಹನೆಯಿಂದ ಎಲ್ಲವನ್ನೂ ತಾಳಿಕೊಳ್ಳುವ ಮಹಿಳೆಯರು ಒಮ್ಮೆ ಒಂದು ಹಂತ ತಲುಪಿದ ಮೇಲೆ ಎಲ್ಲ ಶಕ್ತಿಯನ್ನು ಒಂದುಗೂಡಿಸಿಕೊಂಡು ಹೊರಹೊಮ್ಮುವಂಥ ಬಲಿಷ್ಠ ಪಾತ್ರಗಳು ಮನಸ್ಸಿಗೆ ಹಿಡಿಸುತ್ತವೆ' ಎಂದು ಹೇಳುತ್ತಾರೆ.

ಯಾವುದೇ ಒಂದು ಪಾತ್ರವನ್ನು ಆರಿಸಿಕೊಳ್ಳಬೇಕಾದರೆ ಆ ಪಾತ್ರದ ಭಾವನಾತ್ಮಕ ಸಂಕೀರ್ಣತೆಯೇ ನನ್ನನ್ನು ಆ ಸಿನಿಮಾಗೆ ನಿಜವಾಗಿಯೂ ಕಟ್ಟಿಹಾಕುವುದು ಎಂದಿದ್ದಾರೆ.

ಮಹಿಳೆಯು ತನ್ನ ಬದುಕಿನ ನಿರ್ಧಾರವನ್ನು ತಾನೇ ಮಾಡಬೇಕಾದ ಸಂದರ್ಭದಲ್ಲಿ ಮಹಿಳೆಯ ಪರವಾಗಿ ನಿರ್ಧಾರಗಳನ್ನು ಯಾಕೆ ಮಾಡಲಾಗುತ್ತದೆ ಎಂಬ ಪ್ರಶ್ನೆಯನ್ನು ನನ್ನ ಪಾತ್ರ ಹುಟ್ಟುಹಾಕಬೇಕು. ನಾನು ಯಾವುದೇ ಸಿನಿಮಾಗೆ ಓಕೆ ಎನ್ನುವ ರೀತಿ ಬಹಳ ಸರಳ; ಆ ಪಾತ್ರ ಭಾವನಾತ್ಮಕವಾಗಿ ಆಳವಾಗಿರಬೇಕು ಮತ್ತು ಹೆಣ್ಣಿನ ಅಭಿಪ್ರಾಯವನ್ನು ದಿಟ್ಟವಾಗಿ ಹೇಳುವಂಥ ಪಾತ್ರ ನನ್ನದಾಗಬೇಕು' ಎಂದು ತಮ್ಮಲ್ಲಿರುವ ಪಾತ್ರಾಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ.

ಸದ್ಯ 'ದಿ ರೈಸ್ ಆಫ್ ಅಶೋಕ' ಸಿನಿಮಾದಲ್ಲಿ ನೀನಾಸಂ ಸತೀಶ್ ಜೊತೆ ಸಪ್ತಮಿ ನಟಿಸುತ್ತಿದ್ದಾರೆ. ಈ ಸಿನಿಮಾದಲ್ಲಿಯೂ ತಮ್ಮ ಪಾತ್ರ ಸುಂದರವಾಗಿರುವುದಾಗಿ ಹೇಳಿಕೊಂಡಿದ್ದಾರೆ.

'ಸಿನಿಮಾದಲ್ಲಿ ನಾನು ಅಂಬಿಕಾ ಎಂಬ ಪಾತ್ರವನ್ನು ನಿರ್ವಹಿಸಿದ್ದೇನೆ. 70–80ರ ದಶಕದಲ್ಲಿ ಹೂ ಮಾರುವ ಹಳ್ಳಿ ಹೆಣ್ಣು ಮಗಳೊಬ್ಬಳ, ಸ್ವಾವಲಂಬಿ ಮಹಿಳೆಯ ಪಾತ್ರ. ತನ್ನ ಬದುಕಿನ ನಿರ್ಧಾರವನ್ನು ಇನ್ನೊಬ್ಬರು ಯಾಕೆ ತೆಗೆದುಕೊಳ್ಳುತ್ತಾರೆ ಎಂದು ಹೆಣ್ಣೊಬ್ಬಳು ಪ್ರಶ್ನಿಸುವಂತಿದೆ' ಎಂದು ವಿವರಿಸಿದ್ದಾರೆ.

# 'ಸಿನಿಮಾ ಕ್ಷೇತ್ರಕ್ಕೆ ಹೊಸಬರು ಬರುತ್ತಲೇ ಇರಬೇಕು'

ಕಳೆದ ನಾಲ್ಕು ವರ್ಷಗಳಿಂದ ಕನ್ನಡ ಚಿತ್ರರಂಗದ ಯಾವ ಸಮಾರಂಭಗಳಲ್ಲಿಯೂ ಕಾಣಿಸಿಕೊಂಡಿರದಿದ್ದ ನಟ ಯಶ್ ಈಚೆಗೆ ಯೋಗರಾಜ್ ಭಟ್ ನಿರ್ದೇಶಿಸಿರುವ 'ಮನದ ಕಡಲು' ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಕಾಣಿಸಿಕೊಂಡಿದ್ದರು.

ಇದೇ ವೇಳೆ ಕನ್ನಡ ಸಿನಿಮಾರಂಗಕ್ಕೆ ಸಂಬಂಧಿಸಿದಂತೆ ಸಾಕಷ್ಟು ಮಾತುಗಳನ್ನೂ ಆಡಿದರು.

'ನಾನೂ ಕೂಡ ಕನ್ನಡ ಸಿನಿಮಾಗಳನ್ನು ನೋಡುವವರು, ಬೆಂಬಲಿಸುವವರು ಇಲ್ಲ ಎಂದು ನಂಬಿದ್ದ ದಿನಗಳಿದ್ದವು. ಆದರೆ ನಾವು ಒಳ್ಳೆಯ ಸಿನಿಮಾ ನೀಡಿದರೆ, ನಮ್ಮ ಕೆಲಸವನ್ನು ನಾವು ಉತ್ತಮವಾಗಿ ಮಾಡುತ್ತಾ ಹೋದರೆ ಅದನ್ನು ಪ್ರೇಕ್ಷಕರು ನಿರಾಕರಿಸುವುದಿಲ್ಲ. ಅವರು ಎಂದಿಗೂ ಒಳ್ಳೆಯ ಸಿನಿಮಾವನ್ನು ಬೆಂಬಲಿಸುವುದನ್ನು

